# ವಿಶ್ವ ಕನ್ನಡ ಸಮ್ಮೇಳನ ನಗಾರಿ



‘ಕಾವೇರಿ’ ಕನ್ನಡ ಸಂಘ ಮತ್ತು ‘ಅಕ್ಕ’ ಸಹಯೋಗದಲ್ಲಿ

## 4ನೇ ವಿಶ್ವ ಕನ್ನಡ ಸಮ್ಮೇಳನ

(2006 ಸಪ್ಟೆಂಬರ್ 1 , 2 ಮತ್ತು 3. ಬಾಲ್ಟಿಮೋರ್ ಕನ್ವೆನ್ಷನ್ ಸೆಂಟರ್)

ವಾರ್ತಾಪ್ರಕಟಣೆ–ಜುಲೈ 20, 2006

* * * * * * * * * * * * * * * * * * * * * * * * * * * * * * * * * * * * * * * * * * * * * * * * * * * *

## ಆಧ್ಯಾತ್ಮಿಕ ಉಪನ್ಯಾಸಗಳು ಮತ್ತು ವಿಚಾರ ಸಂಕಿರಣಗಳು

ಅಕ್ಕ ಸಮ್ಮೇಳನವೆಂದರೆ ಅಲ್ಲಿ ರಂಗುರಂಗಿನ ಕಾರ್ಯಕ್ರಮಗಳಿಂದ ಕಣ್ಣುಗಳಿಗೆ ಹಬ್ಬ, ರಾಗಬದ್ಧ ಸಂಗೀತದಿಂದ ಕಿವಿಗಳಿಗೆ ಹಬ್ಬ, ರುಚಿರುಚಿಯಾದ ಊಟದಿಂದ ಹೊಟ್ಟೆಗೂ ಹಬ್ಬ... ಇಷ್ಟು ಮಾತ್ರ ಎಂದುಕೊಂಡಿರಾ? ಈಬಾರಿಯ ಸಮ್ಮೇಳನದಲ್ಲಿ ಇವೆಲ್ಲದರ ಜತೆಗೆ ಮನಸ್ಸಿಗೆ ಹೊಸ ಹೊಳಪು ಕೊಡುವ, ಚಿಂತನೆಯನ್ನು ಒರೆಗೆ ಹಚ್ಚಿ ಹರಿತವಾಗಿಸುವ ಆಧ್ಯಾತ್ಮಿಕ ಉಪನ್ಯಾಸಗಳು ಮತ್ತು ವಿಚಾರಸಂಕಿರಣಗಳನ್ನೂ ಹಮ್ಮಿಕೊಳ್ಳಲಾಗಿದೆ. ಕನ್ನಡ ನಾಡಿನ ಪ್ರಖ್ಯಾತ ಧಾರ್ಮಿಕ ಮುಖಂಡರು, ವಾಗ್ಮಿಗಳು, ವಿದ್ವಾಂಸರು ಸರಳಗನ್ನಡದಲ್ಲಿ ಆಧ್ಯಾತ್ಮತತ್ತ್ವಗಳ ಉಪನ್ಯಾಸ ಕೊಡುತ್ತಿರುವುದು – ಅಮೆರಿಕದ ನೆಲದಲ್ಲಿ ಇಂಥ ಅವಕಾಶಗಳು ನಿಜಕ್ಕೂ ಅಪರೂಪವೇ. ಈ ನಿಟ್ಟಿನಲ್ಲೂ ಇದೊಂದು ಅಭೂತಪೂರ್ವ ಸಮ್ಮೇಳನವಾಗಲಿದೆ!

ಸಮ್ಮೇಳನದ ಎರಡು ದಿನಗಳಲ್ಲೂ (ಸಪ್ಟೆಂಬರ್ 2 ಮತ್ತು 3) ಸಮಾನಾಂತರ ಅಧಿವೇಶನಗಳಲ್ಲಿ ಈ ಆಧ್ಯಾತ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಮೊದಲ ದಿನದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರು ವಹಿಸುತ್ತಾರೆ. ಅಂದಿನ ಕಾರ್ಯಕ್ರಮದಲ್ಲಿ ಕರ್ನಾಟಕದ ಆಧ್ಯಾತ್ಮಿಕ ಪರಂಪರೆಯ ಪಕ್ಷಿನೋಟ ಪರಿಚಯ ಪ್ರೊ ಶ್ರೀಧರ್ ಅವರಿಂದ, ಕರ್ನಾಟಕಕ್ಕೆ ದಾಸಸಾಹಿತ್ಯದ ಕೊಡುಗೆ ಎಂಬ ವಿಷಯದ ಬಗ್ಗೆ ಪ್ರೊಲಕ್ಷ್ಮೀದೇವಿಯವರ ಭಾಷಣ ಮತ್ತು ‘ಅಧ್ಯಾತ್ಮ’ ಕುರಿತು ಶ್ರೀ ಸಿದ್ಧೇಶ್ವರ ಸ್ವಾಮಿಗಳ ಉಪನ್ಯಾಸವಿದೆ. ಅದೇ ಕಾರ್ಯಕ್ರಮದಲ್ಲಿ ದೈವಜ್ಞ ಕೆ.ಎನ್.ಸೋಮಯಾಜಿಯವರು ‘ವಾಸ್ತು’ ಬಗ್ಗೆ ಮತ್ತು ಜಯಕೃಷ್ಣ ಅವರು ‘ಜ್ಞಾನ’ದ ಬಗ್ಗೆಯೂ ಮಾತಾಡಲಿದ್ದಾರೆ.

ಎರಡನೆ ದಿನದ ಅಧಿವೇಶನಕ್ಕೆ ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪ ಅಧ್ಯಕ್ಷತೆ ವಹಿಸುತ್ತಾರೆ. ಅಂದು ಪ್ರೊ ಜಿ. ಅಶ್ವತ್ಥನಾರಾಯಣ ಅವರಿಂದ ‘ಕರ್ನಾಟಕಕ್ಕೆ ಜೈನಧರ್ಮದ ಕೊಡುಗೆ’ ಎಂಬ ವಿಷಯದಲ್ಲಿ ಹಾಗೂ ರೋಹಿತ್ ಶೆಟ್ಟಿ ಅವರಿಂದ ‘ಕರ್ನಾಟಕದಲ್ಲಿ ಬೌದ್ಧ ಧರ್ಮ’ ಕುರಿತ ಭಾಷಣಗಳಿವೆ. ಡಾ. ಶಿವಾನಂದ ಶಿವಾಚಾರ್ಯರಿಂದ ‘ಶೂನ್ಯ ಸಂಸ್ಕೃತಿ’ಯ ಬಗ್ಗೆ ಉಪನ್ಯಾಸ, ‘ಸಮಯದ ಕರೆ – ಆಧ್ಯಾತ್ಮಿಕ ಜ್ಞಾನ’ ಎಂಬ ವಿಷಯದ ಬಗ್ಗೆ ಬಿ.ಕೆ.ಮೃತ್ಯುಂಜಯ ಅವರಿಂದ ಭಾಷಣ ಹಾಗೂ ಕರ್ನಾಟಕದ ಸಂತರ ಬಗ್ಗೆ ಆಧ್ಯಾತ್ಮಿಕ ಸಮಿತಿಯ ಪ್ರಸ್ತುತಿ – ಇವು ಸಹ ಎರಡನೆ ದಿನದ ಕಾರ್ಯಕ್ರಮದ ಮುಖ್ಯಾಂಶಗಳಾಗಿರುತ್ತವೆ.

ಸಮ್ಮೇಳನದಲ್ಲಿ ಭಾಗವಹಿಸುವವರೆಲ್ಲ ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಅವುಗಳ ಪ್ರಯೋಜನವನ್ನು ಪಡೆಯಬೇಕೆಂದು ಆಧ್ಯಾತ್ಮಿಕ ಕಾರ್ಯಕ್ರಮ ಸಮಿತಿ ಸಾದರಪೂರ್ವಕ ಆಹ್ವಾನಿಸುತ್ತಿದೆ.

## ಸಮ್ಮೇಳನ ಉದ್ಘಾಟನೆ ಶುಕ್ರವಾರ (ಸಪ್ಟಂಬರ್ 1) ಸಂಜೆಯೇ!

ನಾಲ್ಕನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮವು ಸಪ್ಟೆಂಬರ್ 1ರಂದು ಶುಕ್ರವಾರ ಸಂಜೆ 5 ಗಂಟೆಗೇ ನಡೆಯುತ್ತದೆ. ಕರ್ನಾಟಕದ ಮಾನ್ಯ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ವಿಧ್ಯುಕ್ತವಾಗಿ ಉದ್ಘಾಟನೆ ಮಾಡಿದ ನಂತರ ಸಮ್ಮೇಳನದ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ದೊರೆಯುತ್ತದೆ. ಈ ಹಿಂದಿನ ಸಮ್ಮೇಳನಗಳಲ್ಲಿ ಹೆಚ್ಚಾಗಿ ಶುಕ್ರವಾರ ಅನೌಪಚಾರಿಕ ಕಾರ್ಯಕ್ರಮಗಳು ಮಾತ್ರ ಇರುತ್ತಿದ್ದು ಶನಿವಾರ ಬೆಳಗ್ಗೆ ಮೆರವಣಿಗೆಯ ನಂತರ ಮುಖ್ಯ ಸಭಾಂಗಣದ ವೇದಿಕೆಯಲ್ಲಿ ದೀಪ ಬೆಳಗಿ ಸಮ್ಮೇಳನ ಉದ್ಘಾಟನೆ ನಡೆದುಬಂದ ಕ್ರಮ. ಈಬಾರಿ ಶುಕ್ರವಾರ ಸಂಜೆಯೇ ನುಡಿಹಬ್ಬದ ದೃಶ್ಯವೈಭವ ತೆರೆದುಕೊಳ್ಳುತ್ತದೆ. ಅತಿಜನಪ್ರಿಯವೆಂದುಕೊಳ್ಳಲಾಗಿರುವ ‘ಹಾಸ್ಯೋತ್ಸವ’ ಮತ್ತು ಈ ಸಮ್ಮೇಳನದ ವಿಶೇಷ ಆಕರ್ಷಣೆಯಾಗಿರುವ ‘ನೃತ್ಯ ನೃತ್ಯ’ ಕಾರ್ಯಕ್ರಮಗಳೂ ಶುಕ್ರವಾರ ರಾತ್ರಿಯ ವೇಳಾಪಟ್ಟಿಯಲ್ಲೇ ಇವೆ. ಶನಿ–ಭಾನುವಾರಗಳಂದು ದಿನವಿಡೀ ಮುಖ್ಯವೇದಿಕೆಯಲ್ಲಿ ಮತ್ತು ಸಮಾನಾಂತರ ಅಧಿವೇಶನಗಳಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯುತ್ತವೆ. ದೂರದೂರುಗಳಿಂದ ಆಗಮಿಸುವ ಸಮ್ಮೇಳನಾರ್ಥಿಗಳು ಶುಕ್ರವಾರ ಸಂಜೆಯೇ ಉದ್ಘಾಟನಾ ಸಮಾರಂಭವೆಂಬುದನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಳ್ಳಬೇಕೆಂದು ಸಮ್ಮೇಳನ ಸಂಚಾಲಕರು ವಿನಂತಿಸಿದ್ದಾರೆ.

## ವಿಧವಿಧದ ಪ್ರಸ್ತುತಿಗಳ ಆಯೋಜಿಸಿರುವ ಮಹಿಳಾಸಮಿತಿ

ಯಶಸ್ವಿ ಪುರುಷನ ಹಿಂದೆ ಮಹಿಳೆಯ ಶ್ರಮವಿರುತ್ತದೆ... ಎನ್ನುತ್ತಾರೆ. ಈ ಸಲದ ವಿಶ್ವ ಕನ್ನಡ ಸಮ್ಮೇಳನವನ್ನು ಯಶಸ್ವಿಗೊಳಿಸಲು ವಿವಿಧ ಸಮಿತಿಗಳಲ್ಲಿ ಮಹಿಳೆಯರೂ ಸಕ್ರಿಯರಾಗಿರುವುದಷ್ಟೇ ಅಲ್ಲದೆ ಮಹಿಳೆಯರದೇ ಪ್ರತ್ಯೇಕ ಸಮಿತಿಯೂ ಇದೆ. ಈ ಸಮಿತಿಯು ಆಯೋಜಿಸಿರುವ ಮುಖ್ಯ ಕಾರ್ಯಕ್ರಮಗಳ ಪೈಕಿ ವಿಚಾರಗೋಷ್ಠಿಗಳು, ಭಾಷಣಗಳು, ಪ್ರಾತ್ಯಕ್ಷಿಕೆಗಳು ಮತ್ತು ಕಲಾಪ್ರದರ್ಶನಗಳು ಸೇರಿವೆ. ವೇದಿಕೆ ಮಹಿಳೆಯರದೇ ಆದರೂ ಪ್ರೇಕ್ಷಕರಾಗಿ ಪುರುಷರಿಗೂ ಆದರದ ಆಹ್ವಾನವಿದೆಯೆನ್ನಿ!

www.murthy.comನ ಪ್ರಖ್ಯಾತ ಇಮಿಗ್ರೇಷನ್ ಎಟಾರ್ನಿ ಶೀಲಾಮೂರ್ತಿ 'Secrets of a Successful CEO' ಏನೆಂದು ತಿಳಿಸಲಿದ್ದಾರೆ. ಡಾ. ಪ್ರೇಮಾ ಗಂಗಣ್ಣ ಅವರು ಪೌಷ್ಟಿಕ ಆಹಾರದ ಕುರಿತು ಮಾತಾಡುತ್ತಾರೆ. ‘ದಕ್ಷಿಣ ಏಷ್ಯಾದ ಮಹಿಳೆಯರು ಅಮೆರಿಕದಲ್ಲಿ ತೋರುತ್ತಿರುವ ನಿರ್ವಹಣೆ’ ಕುರಿತು ಗೀತಾ ರಾಮಮೂರ್ತಿ ಬೆಳಕುಚೆಲ್ಲುತ್ತಾರೆ. ಮಕ್ಕಳ ಶಿಕ್ಷಣದಲ್ಲಿ ಶಿಕ್ಷಕ–ರಕ್ಷಕ ಸಹಯೋಗದ ಪ್ರಯೋಜನಗಳ ಬಗ್ಗೆ ಪೂರ್ಣಿಮಾ ಜೈರಾಜ್ ಮತ್ತು ಅಮೆರಿಕ ರಾಜಕೀಯ ವ್ಯವಸ್ಥೆಯಲ್ಲಿ ತೊಡಗಿಸಿಕೊಳ್ಳುವುದರ ಬಗ್ಗೆ ಅಮೆರಿಕನ್ನಡತಿ ರಾಜಕಾರಣಿ ಜಯಂತಿ ರಾವ್ ಮಾತನಾಡಲಿದ್ದಾರೆ. ಡಾ. ಅಂಜನಾ ರಾಮ್ ಅವರಿಂದ ‘ಎಂಪ್ಟಿ ನೆಸ್ಟ್ ಸಿಂಡ್ರೊಮ್’ ವಿಷಯದ ಬಗ್ಗೆ ಮತ್ತು ಪ್ರತಿಮಾ ರಾಮ್ ಅವರಿಂದ ಬ್ಯಾಂಕಿಂಗ್ ಉದ್ಯಮದ ಬಗ್ಗೆ ಉಪನ್ಯಾಸಗಳಿವೆ. ಇವಲ್ಲದೆ ಬಹುಜನರ ಆಸಕ್ತಿಯನ್ನು ಕೆರಳಿಸಬಹುದಾದ ವಿಚಾರಗೋಷ್ಠಿಯೊಂದೂ ಏರ್ಪಟ್ಟಿದೆ. ವಿಷಯ – Dating and Marriage!

ಸ್ಥಳೀಯ ಪ್ರತಿಭೆಗಳ ವಿವಿಧ ಕರಕುಶಲ ಕಲೆಗಳ ಪ್ರದರ್ಶನ, ಮೆಹಂದಿ, ಫ್ಲೇಶಿಯಲ್ಸ್ ಮತ್ತಿತರ ಸೌಂದರ್ಯವರ್ಧನೆಯ ಕಾರ್ಯಾಗಾರಗಳು, ರೇಷ್ಮೆಸೀರೆ ಬಹುಮಾನದ ಅದೃಷ್ಟಚೀಟಿ, ಆರು ವರ್ಷಗಳೊಳಗಿನ ಮಕ್ಕಳಿಗೆ ಫೇಸ್‌ಪೈಂಟಿಂಗ್, ಕಾರ್ಟೂನ್ ಕಾಸ್ಟ್ಯೂಮ್ಸ್ ಆಕರ್ಷಣೆಗಳು – ಇವು ಮಹಿಳಾಸಮಿತಿ ಆಯೋಜಿಸಿರುವ ಇನ್ನಿತರ ಪ್ರಸ್ತುತಿಗಳು. ಒಂದು ನಿಮಿಷದಲ್ಲಿ ಕೇಶ ಶೃಂಗಾರ ಮಾಡಿಕೊಡುವ ಗಿನೆಸ್ ದಾಖಲೆ ಸ್ಥಾಪಿಸಿರುವ ಬೆಂಗಳೂರಿನ ‘ಒನ್ ಮಿನಿಟ್ ಉಮಾ’ ಅವರನ್ನು ಸಮ್ಮೇಳನಕ್ಕೆ ವಿಶೇಷವಾಗಿ ಆಹ್ವಾನಿಸಲಾಗಿದ್ದು ಅವರ ಭಾಗವಹಿಸುವಿಕೆ ಮತ್ತು ಅದ್ಭುತ ಕೈಚಳಕದ ಪ್ರದರ್ಶನಗಳು ಅವರಿಗೆ ಅಮೆರಿಕ ಪ್ರಯಾಣದ ವಿಸಾ ಲಭ್ಯತೆಯ ಮೇಲೆ ನಿರ್ಧಾರವಾಗಲಿವೆ.

* * * * * * * * * * * * * * * * * * * * * * * * * * * * * * * * * * * * * * * * * * * * * * * * * * * *

*ಇದು 4ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನದ ‘ವಾರ್ತಾ ಮತ್ತು ಪ್ರಚಾರ’ ಸಮಿತಿಯ ಪ್ರಕಟಣೆ. ಸಂಯೋಜನೆ: ಶ್ರೀವತ್ಸ ಜೋಶಿ*

ಸಮ್ಮೇಳನದ ಅಧಿಕೃತ ಜಾಲತಾಣ: **www.akkaonline.org/2006** ಮಿ–ಅಂಚೆ: **wkc2006@gmail.com**

ಸಂಪರ್ಕ ವಿಳಾಸ: **AKKA WKC 2006, 451 Hungerford Drive, #119-341, Rockville, MD 20850 USA** ದೂರವಾಣಿ ಮತ್ತು ಫ್ಯಾಕ್ಸ್: **1-877-WKC-2006**